ಓ ಎಸ್ 386/2008

**PW 2**

ದಿಃ 11-12-2019 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲು ಃ ಶ್ರೀ ವಿ.ವಿ.ಕೆ ವಕೀಲರಿಂದ ಪ್ರತಿವಾದಿ ನಂ.6 ರ ಪರ;

ನನಗೆ ಸಾಕ್ಷಿ ಹೇಳಲು ನ್ಯಾಯಾಲಯದಿಂದ ಸಮನ್ಸ ಬಂದಿತ್ತು. ನನ್ನ ಮನೆ ನಂ. 254 ಇರುತ್ತದೆ, ಸದರಿ ಮನೆ ನನಗೆ ನಮ್ಮ ಹಿರಿಯರಿಂದ ಬಂದಿರುತ್ತದೆ. ನನ್ನ ಗಂಡನ ಅಜ್ಜನ ಕಡೆಯಿಂದ ಬಂದಿರುತ್ತದೆ, ನನ್ನ ಗಂಡನ ಅಜ್ಜನ ಹೆಸರು ಬಸಪ್ಪ. ಬಸಪ್ಪ ಇವರಿಗೆ 3 ಜನ ಮಕ್ಕಳು, ಅವರ ಹೆಸರು ಈರಪ್ಪ, ಬಸಲಿಂಗಪ್ಪಾ, ಬಸವಣ್ಣೆಪ್ಪ. ಈರಪ್ಪ ಇವರಿಗೆ ಇಬ್ಬರು ಮಕ್ಕಳು, ಅವರ ಹೆಸರು ಬಸಪ್ಪ ಮತ್ತು ದುಂಡಪ್ಪ ಎಂದರೆ ಸರಿ. ದುಂಡಪ್ಪ ಇವರ ಮಗನ ಹೆಸರು ಬಸಲಿಂಗಪ್ಪಾ ಎಂದರೆ ಸರಿ. ಈರಪ್ಪ ರವರ ಮಗ ಬಸಪ್ಪ ಇವರು ಮೃತಪಟ್ಟಿರುತ್ತಾರೆ, ಅವರು ಯಾವ ದಿನಾಂಕದಂದು ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡನ ಹೆಸರು ಗಂಗಪ್ಪ ಈರಪ್ಪ, ದುಂಡಪ್ಪಾ ಇವರಿಗೆ ನನ್ನ ಗಂಡ ಮಗ ಆಗಬೇಕು. ಬಸಲಿಂಗಪ್ಪಾ ರವರ ಮಗ ಬಸವಂತಪ್ಪ ಎಂದರೆ ಸರಿ. ಬಸಲಿಂಗಪ್ಪಾ ರವರು ಎಂದು ತೀರಿಕೊಂಡಿರುತ್ತಾರೆ ಎಂದು ನನಗೆ ಹೇಳಲು ಬರುವದಿಲ್ಲ, ಬಸವಂತಪ್ಪ ರವರ ಮಗ ಈರಪ್ಪಾ ಎಂದರೆ ಸರಿ. ಬಸವಂತಪ್ಪರವರ ಮಗ ನನ್ನ ಗಂಡನಿಗೆ ಕಾಕಾ ಆಗಬೇಕು. ಈರಪ್ಪ, ಬಸಲಿಂಗಪ್ಪಾ, ಬಸವಂತಪ್ಪ ರವರು ನನಗೆ ಮಾವನವರು ಆಗಬೇಕು. ನನಗೆ ಈರಪ್ಪ, ಬಸಲಿಂಗಪ್ಪಾ, ಬಸವಂತಪ್ಪ ಇವರಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಸನ್ 1965 ರಲ್ಲಿ ಈರಪ್ಪ, ಬಸಲಿಂಗಪ್ಪಾ ಹಾಗೂ ಬಸವಂತಪ್ಪ ಇವರ ನಡುವೆ ಪಾಲು ಆಗಿರುವ ವಿಷಯ ನಿಮಗೆ ಗೊತ್ತಿರುವ ಎನ್ನುವ ಪಶ್ನೆಗೆ ಸಾಕ್ಷಿಯು ಪಾಲು ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಪಾಲು ಆಗಿರುವುದಿಲ್ಲ ಎಂದು ನಾನು ನ್ಯಾಯಾಲಯದ ಮುಂದೆ ಇದ್ದ ದಾಖಲೆಗಳನ್ನು ನೋಡಿರುತ್ತೇನೆ, ದುಂಡಪ್ಪ ಇವರ ಹೆಸರು ಈರಪ್ಪನವರ ಮರಣ ನಂತರ ಬಂದಿರುತ್ತದೆ ಎಂದರೆ ಸಾಕ್ಷಿಯು ದುಂಡಪ್ಪ ಇವರು ಶ್ಯಾನೆ ಇದ್ದುದ್ದರಿಂದ ಅವರು ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸನ್ 1965 ರಲ್ಲಿ ಪಾಲಾಗಿರುತ್ತದೆ, ದುಂಡಪ್ಪಾ ಇವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಈರಪ್ಪಾ, ಬಸಲಿಂಗಪ್ಪಾ ಮತ್ತು ಬಸವಣ್ಣೆಪ್ಪ ಇವರ ಮಧ್ಯೆ ಪಾಲಾಗಿರುತ್ತದೆ ಎಂದರೆ ಸರಿ. ದುಂಡಪ್ಪಾ, ಬಸಪ್ಪಾ ಮತ್ತು ಗಂಗಪ್ಪಾ ಇವರ ಮಧ್ಯೆ ಪಾಲಾಗಿರುತ್ತದೆ, ಪಾಲಾಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಶಿವಲಿಂಗಪ್ಪಾ ರವರು ನಮ್ಮ ಮನೆತನದಲ್ಲಿ ಪಾಲಾಗುವಾಗ ಹಿರಿತನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೆಚ್ಚಿಗೆ ಪಾಲು ಕೇಳಿರುತ್ತೇನೆ ಕೊಡದೇ ಇದ್ದುದ್ದರಿಂದ ನಾನು ಅವರ ವಿರುದ್ಧ ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಬಸಲಿಂಗಪ್ಪಾ ಈರಪ್ಪಾ ಇವರು ನನಗೆ ಮಾವ, ಬಸಲಿಂಗಪ್ಪಾ ಅಂಗಡಿ ಇವರಿಗೆ ಸರ್ವೆ ನಂ. 121/1, ಕ್ಷೇತ್ರ 3 ಎಕರೆ ಜಮೀನು ಅಡಿಬಟ್ಟಿ ಗ್ರಾಮದಲ್ಲಿ ಇದೆ ಎಂದರೆ ಸರಿಯಲ್ಲ. ಬಸವಂತಪ್ಪನ ಮಗ ಈರಪ್ಪಾ ಇವರಿಗೆ ಬಸಲಿಂಗಪ್ಪ, ಮಹಾಂತಪ್ಪ, ಬಸವಂತಪ್ಪ 3 ಜನ ಮಕ್ಕಳು ಎಂದರೆ ಸರಿ.

ಬಸಲಿಂಗಪ್ಪ, ಮಹಾಂತಪ್ಪ, ಬಸವಂತಪ್ಪ ಇವರು ಖನಗಾಂವ ಬಿಟ್ಟು ಅಡಿಬಟ್ಟಿ ಗ್ರಾಮಕ್ಕೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿ ಅವರು ಸರ್ವೆ ನಂ. 121/1, ಕ್ಷೇತ್ರ 3 ಎಕರೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನು ಪಾಲಾದ ಮೇಲೆ ತೆಗೆದುಕೊಂಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನು ಈ ದಾವೆಯಲ್ಲಿ ಹಾಕಿರುವುದಿಲ್ಲ ಎಂದರೆ ಸಾಕ್ಷಿಯು ಅವರ ಜಮೀನು ಇರುವುದಿಲ್ಲ ಎಂದು ನುಡಿದಿರುತ್ತಾರೆ, ಎಲ್ಲ ಗೊತ್ತಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವೆಯ ಆಸ್ತಿಯನ್ನು ಪ್ರತಿವಾದಿ ನಂ. 6 ರವರು ಖರೀದಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.6 ರವರ ಹೆಸರು ಉತಾರದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.6 ರವರ ಹೆಸರಿನಲ್ಲಿ ಡಾಯರಿ ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.6 ರವರು ಶಿವಲಿಂಗಪ್ಪಾ ರವರ ಕಡೆಯಿಂದ ಚೌಕಶಿ ಮಾಡಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನಿಗೆ ಪ್ರತಿವಾದಿ ನಂ.6 ರವರು ಕಬ್ಜೆಯಲ್ಲಿದ್ದಾರೆ ಎಂದರೆ ಸರಿಯಲ್ಲ. ಖರೀದಿ ಕಾಗದವನ್ನು ನೋಡುವ ಪ್ರಸಂಗ ಬಂದಿರುವುದಿಲ್ಲ, ಏಕೆಂದರೆ ಖರೀದಿ ಆಗಿರುವುದಿಲ್ಲ. ಖರೀದಿ ದಿನದಿಂದ ಪ್ರತಿವಾದಿ ನಂ. 6 ರವರ ಕಬ್ಜೆಯಲ್ಲಿ ಇದೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ವಯಸ್ಸಾಗಿರುತ್ತದೆ, ಅವರಿಗೆ ಪಾಲಾಗಿರುವ ಬಗ್ಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಮನೆತನವನ್ನು ನಾನು ಮತ್ತು ನನ್ನ ಗಂಡ ನಡೆಸುತ್ತೇವೆ.

ಪ್ರತಿವಾದಿ ನಂ.6 ರವರು ಬ್ಯಾಂಕಿನಿಂದ ಸಾಲ ತೆಗೆಯಿಸಿ ಭಾವಿ ತೆಗೆಯಿಸಿದ್ದಾರೆ ಎಂದರೆ ಸರಿಯಲ್ಲ. ಬ್ಯಾಂಕಿನಲ್ಲಿ ಸಾಲ ಪಡೆದ ಬಗ್ಗೆ ಉತಾರದಲ್ಲಿ ಬರೆದಿರುತ್ತದೆ ಎಂದರೆ ಸರಿಯಲ್ಲ. ನಾನು ಶಿವಲಿಂಗಪ್ಪಾ ಇವರ ಮೇಲೆ ಸಿಟ್ಟು ಇದ್ದುದ್ದರಿಂದ ಇವರ ವಿರುದ್ಧ ಸಾಕ್ಷಿ ಹೇಳುತ್ತಿದ್ದೆನೆಂದರೆ ಸರಿಯಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ್ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ಕುಮಾರಿ. ಶೋಭಾ)

ಹೆ.ದಿ.&ನ್ಯಾ.ದಂ.,ಗೋಕಾಕ.